ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

---

**ಸಂಖ್ಯೆ : ವಾಇ : ಜಂ ನಿ : ಸುಮಪ : 2021–22** **ದಿನಾಂಕ : 17–08–2021**

## ಮಾಧ್ಯಮ ಆಹ್ವಾನ

## Media Invitation

**2019-20 ನೇ ಸಾಲಿಗೆ ಜೀವಮಾನ ಸಾಧನೆಗಾಗಿ ರಾಷ್ಟ್ರೀಯ ಹಾಗೂ ರಾಜ್ಯಮಟ್ಟದ ವಿವಿಧ ಪ್ರಶಸ್ತಿಗಳಿಗೆ ಆಯ್ಕೆಯಾದ ಗಣ್ಯರಿಗೆ ಪ್ರಶಸ್ತಿ ಪ್ರಧಾನ ಸರಳ ಸಮಾರಂಭ:**

**ಪ್ರಶಸ್ತಿ ಪ್ರಧಾನ :**
**ಬಸವರಾಜ ಬೊಮ್ಮಾಯಿ,**
**ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ**

**ವಿ. ಸುನೀಲ್‌ಕುಮಾರ್**
**ಕನ್ನಡ ಮತ್ತು ಸಂಸ್ಕೃತಿ ಹಾಗೂ ಇಂಧನ ಇಲಾಖೆಯ ಸಚಿವರು, ಕರ್ನಾಟಕ ಸರ್ಕಾರ.**

**ಅಧ್ಯಕ್ಷತೆ:**
**ಉದಯ್ ಬಿ ಗರುಡಾಚಾರ್,**
**ಶಾಸಕರು.**

**ದಿನಾಂಕ: 18–08–2021, ಬುಧವಾರ, ಸಮಯ: ಸಂಜೆ 6.30 ಗಂಟೆಗೆ**
**ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಂಗಳೂರು.**

# ಪತ್ರಿಕಾ ಪ್ರಕಟಣೆ

**PRESS RELEASE**

## ಲೋಕ್ ಅದಾಲತ್ ಮೂಲಕ ಸರ್ವರಿಗೂ ನ್ಯಾಯ
## – ನ್ಯಾಯಮೂರ್ತಿ ಅರವಿಂದಕುಮಾರ್

ಬೆಂಗಳೂರು, ಆಗಸ್ಟ್ 17 (ಕರ್ನಾಟಕ ವಾರ್ತೆ):

ಭಾರತದಲ್ಲಿ ಕಾನೂನು ಸೇವೆಗಳ ಪ್ರಾಧಿಕಾರಗಳ ಧ್ಯೇಯೋದ್ದೇಶ “ಸರ್ವರಿಗೂ ನ್ಯಾಯ” ಎಂಬುದಾಗಿದೆ. ಜನತಾ ನ್ಯಾಯಾಲಯ / ಲೋಕ್ ಆದಾಲತ್‌ಗಳು ದ್ಯೇಯೋದ್ದೇಶವನ್ನು ಸಾಕಾರಗೊಳಿಸುವಲ್ಲಿ ಬಹು ಮುಖ್ಯ ಪಾತ್ರ ವಹಿಸುತ್ತವೆ ಎಂದು ಕರ್ನಾಟಕ ಉಚ್ಚನ್ಯಾಯಾಲಯದ ಗೌರವಾನ್ವಿತ ನ್ಯಾಯಮೂರ್ತಿ ಹಾಗೂ ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷರಾದ ಶ್ರೀ ಅರವಿಂದಕುಮಾರ್ ಅವರು ತಿಳಿಸಿದರು.

ಇಂದು ಕರ್ನಾಟಕ ಉಚ್ಚನ್ಯಾಯಾಲಯದ ಕೋರ್ಟ್ ಹಾಲ್ 1 ರಲ್ಲಿ ಕರೆಯಲಾದ ಪತ್ರಿಕಾಗೋಷ್ಠಿಯಲ್ಲಿ, ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಪ್ರಸ್ತುತ 2021 ಸಾಲಿನಲ್ಲಿ ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರವು 4 ಮೆಗಾ ಲೋಕ್ ಆದಾಲತ್‌ಗಳನ್ನು ನಿಗಧಿಪಡಿಸಿದೆ. ಈ ನಿಟ್ಟಿನಲ್ಲಿ ಈ ವರ್ಷದ ಮೊದಲನೇ ಮೆಗಾ ಲೋಕ್ ಆದಾಲತ್‌ನ್ನು ದಿನಾಂಕ: 27-03-2021 ರಂದು ಆಯೋಜಿಸಲಾಯಿತು. ಪ್ರಸ್ತುತ ಈ ವರ್ಷದ 2ನೇ ಲೋಕ್ ಆದಾಲತ್‌ನ್ನು ದಿನಾಂಕ: 14-08-2021 ರಂದು ಆಯೋಜಿಸಲಾಗಿರುತ್ತದೆ ಎಂದು ತಿಳಿಸಿದರು.

ಕರ್ನಾಟಕ ಸರ್ಕಾರವು ಕೋವಿಡ್-19 ಸಾಂಕ್ರಾಮಿಕ ರೋಗ ತಡೆಗಟ್ಟಲು ಎಂಟು ಜಿಲ್ಲೆಗಳಾದ ದಕ್ಷಿಣ ಕನ್ನಡ, ಕೊಡಗು, ಮೈಸೂರು, ಚಾಮರಾಜನಗರ, ಬೆಳಗಾವಿ, ವಿಜಯಪುರ, ಬೀದರ್ ಹಾಗೂ ಕಲಬುರಗಿ ಜಿಲ್ಲೆಗಳಲ್ಲಿ ವಾರಾಂತ್ಯದ ಕರ್ಫ್ಯೂ ಹೇರಿದ ಕಾರಣ ಎಂಟು ಜಿಲ್ಲೆಗಳಲ್ಲಿ ಮೆಗಾ ಲೋಕ್ ಆದಾಲತ್‌ನ್ನು ದಿನಾಂಕ: 16-08-2021 ರಂದು ನಡೆಸಲು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಅನುಮತಿಸಿತ್ತು.

ದಿನಾಂಕ: 14-08-2021 ರಂದು ಬೆಳಿಗ್ಗೆ 10.30 ಕ್ಕೆ ಗೌರವಾನ್ವಿತ ಶ್ರೀ ನ್ಯಾಯಮೂರ್ತಿ ಎ.ಜೆ. ಸದಾಶಿವ, ವಿಶ್ರಾಂತ ನ್ಯಾಯಮೂರ್ತಿಗಳು, ಕರ್ನಾಟಕ ಉಚ್ಚ ನ್ಯಾಯಾಲಯ ಇವರು ಮೆಗಾ ಲೋಕ್ ಆದಾಲತ್‌ನ್ನು ಉದ್ಘಾಟನೆ ಮಾಡಿದರು. ಆ ಬಳಿಕ ಭೌತಿಕ ಹಾಗೂ ವಿಡಿಯೋ ಕಾನ್ಫರೆನ್ಸ್ ಮೂಲಕ ರಾಜ್ಯಾದ್ಯಂತ ಲೋಕ್ ಆದಾಲತ್‌ನ್ನು ಸಂಜೆ 5.30 ರವರೆಗೆ ನಡೆಸಲಾಯಿತು.

ದಿನಾಂಕ: 14-08-2021 ರಂದು 14-08-2021 ರಂದು ಏರ್ಪಡಿಸಿದ್ದ ಮೆಗಾ ಲೋಕ್ ಆದಾಲತ್‌ನಲ್ಲಿ ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಲು 79,207 ವ್ಯಾಜ್ಯ ಪೂರ್ವ ಪ್ರಕರಣಗಳ ಪೈಕಿ 33,251 ವ್ಯಾಜ್ಯ ಪೂರ್ವ ಪ್ರಕರಣಗಳು ಹಾಗೂ 5,32,326 ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳ ಪೈಕಿ 3,55,730 ನ್ಯಾಯಾಲಯದಲ್ಲಿನ ಪ್ರಕರಣಗಳು ಒಟ್ಟು 3,88,981 ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಲಾಗಿರುತ್ತದೆ. ಎಂದು ತಿಳಿಸಿದರು.

ಒಟ್ಟು 3,88,981 ಪ್ರಕರಣಗಳನ್ನು ಇತ್ಯರ್ಥಪಡಿಸಿ, ರೂ 25,75,03,546-00 ಗಳ ದಂಡದ ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡಲಾಗಿದೆ. ಅಲ್ಲದೆ ಲೋಕ್ ಆದಾಲತ್‌ನಲ್ಲಿ ಇತ್ಯರ್ಥಗೊಂಡ ಪ್ರಕರಣಗಳ ಕಾರಣ ಸಂಬಳ ಹಾಗೂ ಇತರೆ ವೆಚ್ಚಗಳಲ್ಲಿ ಸರ್ಕಾರಕ್ಕೆ ರೂ. 152,19,26,202 ಉಳಿತಾಯವಾಗಲಿದೆ. ಒಟ್ಟಾರೆಯಾಗಿ ಸರ್ಕಾರಕ್ಕೆ ರೂ. 177,94,29,748 ಉಳಿತಾಯವಾಗಲಿದೆ ಎಂದು ನ್ಯಾಯಮೂರ್ತಿಗಳು ತಿಳಿಸಿದರು.

**ಮೆಗಾ ಲೋಕ್ ಅದಾಲತ್ ಮುಖ್ಯ ಅಂಶಗಳು:**

**ವಿಡಿಯೋ ಕಾನ್ಫರೆನ್ಸ್ ಮೂಲಕ ಪ್ರಕರಣಗಳ ಇತ್ಯರ್ಥ:**

ಲೋಕ್ ಅದಾಲತ್‌ನಲ್ಲಿ ಪ್ರಕರಣಗಳನ್ನು ಇತ್ಯರ್ಥಪಡಿಸಲು ವಿಡಿಯೋ ಕಾನ್ಫರೆನ್ಸ್‌ನ್ನು ಬಳಸಿಕೊಳ್ಳಲು ಉತ್ತೇಜಿಸಲಾಗಿದ್ದು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳಿಂದ ಸ್ವೀಕರಿಸಲಾದ ಅಂಕಿ-ಅಂಶಗಳ ಪ್ರಕಾರ ಒಟ್ಟು 4,213 ವ್ಯಾಜ್ಯ ಪೂರ್ವ ಪ್ರಕರಣಗಳು ಹಾಗೂ 21,836 ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ಇತ್ಯರ್ಥಪಡಿಸಲಾಗಿದೆ.

**ದಂಪತಿಗಳ ವೈವಾಹಿಕ ಜೀವನ ಪುನರ್ ಸ್ಥಾಪನೆಗೆ ಉತ್ತೇಜಿಸಿರುವುದು:**

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ವೈವಾಹಿಕ ಪ್ರಕರಣಗಳನ್ನು ಹೆಚ್ಚು ಇತ್ಯರ್ಥಪಡಿಸುವಂತೆ ಉತ್ತೇಜಿಸಲಾಗಿತ್ತು. ಒಟ್ಟು 9,815 ಪ್ರಕರಣಗಳನ್ನು ರಾಜಿಸಂಧಾನಗಕ್ಕಾಗಿ ತೆಗೆದುಕೊಂಡಿದ್ದು, ಅದರಲ್ಲಿ 1,166 ವೈವಾಹಿಕ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದ್ದು, ಸದರಿ 1,166 ಪ್ರಕರಣಗಳಲ್ಲಿ 74 ದಂಪತಿಗಳು ರಾಜಿ ಸಂಧಾನದಿಂದ ಪುನ: ಒಂದಾಗಿ ಜೀವನ ನಡೆಸಲು ತೀರ್ಮಾನಿಸಿ ಪ್ರಕರಣವನ್ನು ಇತ್ಯರ್ಥಪಡಿಸಿಕೊಂಡಿರುತ್ತಾರೆ.

ವಿಚ್ಛೇದನ ಬಯಸಿದ್ದ ಪ್ರಕರಣಗಳಲ್ಲಿ ಮೈಸೂರಿನ 21 ದಂಪತಿಗಳು, ತುಮಕೂರಿನ 17 ದಂಪತಿಗಳು, ಬೆಂಗಳೂರಿನ 8 ದಂಪತಿಗಳು, ಚಿಕ್ಕಮಗಳೂರಿನ 7 ದಂಪತಿಗಳು, ಕೋಲಾರದ 6 ದಂಪತಿಗಳು ಹಾಗೂ ಬೇರೆ ಜಿಲ್ಲೆಗಳಲ್ಲಿ ಇನ್ನೂ ಹೆಚ್ಚಿನ ದಂಪತಿಗಳು ಈ ಮೆಗಾ ಲೋಕ್ ಅದಾಲತ್‌ನ ಸಂಧಾನಕಾರರ ಸಲಹೆಯಂತೆ ಮೈಸೂರಿನ ಮಾನ್ಯ ಪ್ರಧಾನ ಜಿಲ್ಲಾ ನ್ಯಾಯಾಧೀಶರ ಸಮ್ಮುಖದಲ್ಲಿ ಮರು ವಿವಾಹವಾಗಿರುತ್ತಾರೆ.

**ಪಾಲು ವಿಭಾಗ ದಾವೆಗಳ ಇತ್ಯರ್ಥ:**

ಲೋಕ್ ಅದಾಲತ್‌ನ ರಾಜಿ ಸಂಧಾನದ ಮೂಲಕ ಒಟ್ಟು 2,884 ಪಾಲು ವಿಭಾಗ ದಾವೆಗಳನ್ನು ಇತ್ಯರ್ಥಗೊಳಿಸಲಾಗಿರುತ್ತದೆ. ಇದರಿಂದ ಕುಟುಂಬ ವಲಯದಲ್ಲಿ ಶಾಂತಿ ಹಾಗೂ ಸೌಹಾರ್ದತೆ ನೆಲೆಯಾಗಿರುತ್ತದೆ.

**ಭೂಸ್ವಾಧೀನ ಅಮಲ್ಜಾರಿ ಪ್ರಕರಣಗಳ ಇತ್ಯರ್ಥ:**

ಲೋಕ್ ಅದಾಲತ್‌ನ ರಾಜಿ ಸಂದಾನದ ಮೂಲಕ ಒಟ್ಟು 1,028 ಭೂಸ್ವಾಧಿನ ಅಮಲ್ಜಾರಿ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿರುತ್ತದೆ ಹಾಗೂ ರಾಜಿ ಮೊತ್ತ ರೂ.100,57,22,864 ಗಳನ್ನು ವಿತರಿಸಲಾಗಿರುತ್ತದೆ.

**ಮೋಟಾರು ವಾಹನ ಕಾಯ್ದೆಯಡಿಯಲ್ಲಿ ಹೆಚ್ಚಿನ ಅವಾರ್ಡ್:**

ತುಮಕೂರು ಜಿಲ್ಲೆಯ 7ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದಲ್ಲಿ ಎಂ.ವಿ.ಸಿ. ನಂ. 995/2020 ಪ್ರಕರಣದಲ್ಲಿ ಮೆಗಾ ಲೋಕ್ ಅದಾಲತ್‌ನ ರಾಜಿ ಸಂಧಾನದಂತೆ ವಿಮಾ ಕಂಪನಿಯವರು ರೂ. 72,00,000/- ಪರಿಹಾರದ ಮೊತ್ತವನ್ನು ಅರ್ಜಿದಾರರಿಗೆ ಪಾವತಿಸಲು ಒಪ್ಪಿಕೊಂಡಿರುತ್ತಾರೆ. ಹಾಗೆಯೇ ಕುಣಿಗಲ್ ತಾಲ್ಲೂಕಿನ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ಎಂ.ವಿ.ಸಿ.ನಂ. 660/2019 ಇದರಲ್ಲಿ ವಿಮಾ ಕಂಪನಿಯವರು ರೂ. 62,50,000/- ಪರಿಹಾರದ ಮೊತ್ತವನ್ನು ಅರ್ಜಿದಾರರಿಗೆ ಪಾವತಿಸಲು ಒಪ್ಪಿಕೊಂಡಿರುತ್ತಾರೆ ಎಂದು ತಿಳಿಸಿದರು.

**ವಾಣಿಜ್ಯ ದಾವೆಗಳ ಇತ್ಯರ್ಥ:**

ಬೆಂಗಳೂರಿನ ಎಂಟು ವಾಣಿಜ್ಯ ನ್ಯಾಯಾಲಯಗಳಲ್ಲಿ ಒಟ್ಟು 114 ವಾಣಿಜ್ಯ ದಾವೆಗಳನ್ನು ರಾಜಿ ಸಂಧಾನದ ಮೂಲಕ ಬಗೆಹರಿಸಿ ಪರಿಹಾರದ ಮೊತ್ತ ರೂ. 111,17,24,939/- ಗಳನ್ನು ಪಾವತಿಸಲಾಗಿರುತ್ತದೆ.

**ಹಳೆಯ ಪ್ರಕರಣಗಳ ಇತ್ಯರ್ಥ:**

ಈ ಬಾರಿಯ ಮೆಗಾ ಲೋಕ್ ಅದಾಲತ್‌ನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಳೆಯ ಪ್ರಕರಣಗಳನ್ನು ಸಂಧಾನಕಾರರು ಬಗೆಹರಿಸಿರುತ್ತಾರೆ.

ರಾಜ್ಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳು ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಪ್ರಧಾನ ಪೋಷಕರು ಆದ ಗೌರವಾನ್ವಿತ ನ್ಯಾಯಮೂರ್ತಿ ಅಭಯ ಶ್ರೀನಿವಾಸ್ ಓಕ್ ರವರು, ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷರಾದ ನ್ಯಾಯಮೂರ್ತಿ ಅರವಿಂದ ಕುಮಾರ್ ರವರು ಮತ್ತು ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಹಾಗೂ ಉಚ್ಚ ನ್ಯಾಯಾಲಯ ಕಾನೂನು ಸೇವೆಗಳ ಸಮಿತಿಯ ಅಧ್ಯಕ್ಷರಾದ ನ್ಯಾಯಮೂರ್ತಿ ಅಲೋಕ್ ಅರಾಧೆ ರವರು ಮೆಗಾ ಲೋಕ್ ಅದಾಲತ್‌ನಲ್ಲಿ ಹೆಚ್ಚಿನ ಪ್ರಕರಣಗಳನ್ನು ಇತ್ಯರ್ಥ ಪಡಿಸಿರುವ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಲು ಸಂಪೂರ್ಣ ಸಹಕಾರ ನೀಡಿರುವ ನ್ಯಾಯಾಂಗ ಅಧಿಕಾರಿಗಳು, ವಕೀಲರು, ಕಕ್ಷಿದಾರರು, ವಿಮಾ ಕಂಪನಿಯ ಅಧಿಕಾರಿಗಳು, ಬ್ಯಾಂಕ್ ಅಧಿಕಾರಿಗಳು, ಸರ್ಕಾರದ ವಿವಿಧ ಇಲಾಖೆಯ ಮುಖ್ಯಸ್ಥರು, ಅಧಿಕಾರಿಗಳಿಗೆ ಹಾಗೂ ಮಾಧ್ಯಮ ಮಿತ್ರರಿಗೆ ಧನ್ಯವಾದಗಳನ್ನು ಸಲ್ಲಿಸಿದ್ದಾರೆ ಎಂದು ನ್ಯಾಯಮೂರ್ತಿಗಳು ತಿಳಿಸಿದರು.

ದಾವೆ ಸಲ್ಲಿಸುವ ಸಾರ್ವಜನಿಕರು ಹೆಚ್ಚಿನ ಲಾಭಕ್ಕಾಗಿ ಲೋಕ್ ಅದಾಲತ್ ಚಳುವಳಿಯನ್ನು ಜನಪ್ರಿಯಗೊಳಿಸುವುದು ಅಗತ್ಯವಾಗಿದ್ದು, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಅಧಿಕಾರಿಗಳು ವಿಶಿಷ್ಟ ಕ್ರಮಗಳನ್ನು ತೆಗೆದುಕೊಂಡಿರುತ್ತಾರೆ.

- ಕೆ.ಎಸ್.ಆರ್.ಟಿ.ಸಿ ಬಸ್ ಟಿಕೇಟ್‌ಗಳಲ್ಲಿ 14-08-2021ರಂದು ನಿಗಧಿಯಾಗಿರುವ ಅದಾಲತ್ ಕುರಿತು ಸಂದೇಶವನ್ನು ಮುದ್ರಿಸಲಾಗಿದೆ.

- ಸ್ಮಾರ್ಟ್ ಸಿಟಿ ಯೋಜನೆಯಡಿ ಅಳವಡಿಸಲಾಗಿರುವ ಎಲ್.ಇ.ಡಿ. ಸ್ಕ್ರೀನ್‌ಗಳಲ್ಲಿ ಲೋಕ್ ಅದಾಲತ್ ಬ್ಯಾನರ್‌ಗಳನ್ನು ಪ್ರದರ್ಶಿಸಲಾಯಿತು.

- ಅದೇ ರೀತಿ ಟೆಲಿಗ್ರಾಮ್ ಗ್ರೂಪ್ ಮತ್ತು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಟೆಲಿಗ್ರಾಮ್ ಚಾನೆಲ್‌ನ್ನು ರಚಿಸಲಾಗಿದೆ ಎಂದರು.

- ಮಾಧ್ಯಮ ಮಿತ್ರರೂ ಸಹ ಲೋಕ್ ಅದಾಲತ್ ಬಗ್ಗೆ ಹೆಚ್ಚು ಪ್ರಚಾರ ನೀಡಿದರೆ ಇದರಿಂದ ಕಕ್ಷಿದಾರರಿಗೆ, ಸಾರ್ವಜನಿಕರಿಗೆ ಸಮಯ, ಹಣ ಉಳಿತಾಯವಾಗಲಿದೆ ಹಾಗೂ ಎಲ್ಲರಿಗೂ ಅನುಕೂಲವಾಗಲಿದೆ ಎಂದು ಮಾಧ್ಯಮ ಮಿತ್ರರಲ್ಲಿ ನ್ಯಾಯಮೂರ್ತಿಗಳು ಮನವಿ ಮಾಡಿದರು.

## ವಿವಿಧ ವೃಂದದ ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿ ಪ್ರಕಟ

ಬೆಂಗಳೂರು ಆಗಸ್ಟ್ 17 (ಕರ್ನಾಟಕ ವಾರ್ತೆ) :

ಕರ್ನಾಟಕ ಲೋಕಸೇವಾ ಆಯೋಗದ ವಿವಿಧ ವೃಂದದ ಗ್ರೂಫ್ ಸಿ ಹುದ್ದೆಗಳಾದ ಅಲ್ಪಸಂಖ್ಯಾತರ ನಿರ್ದೇಶನಾಲಯದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿನ ಕನ್ನಡ ಭಾಷಾ ಶಿಕ್ಷಕರು (ಉಳಿಕೆ ಮೂಲ ವೃಂದ 38+06 ಹೈ.ಕ), ಅಲ್ಪಸಂಖ್ಯಾತರ ನಿರ್ದೇಶನಾಲಯದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿನ ಉರ್ದು ಭಾಷಾ ಶಿಕ್ಷಕರು (ಉಳಿಕೆ ಮೂಲ ವೃಂದ 38+10 ಹೈ.ಕ), ಅಲ್ಪಸಂಖ್ಯಾತರ ನಿರ್ದೇಶನಾಲಯದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿನ ಆಂಗ್ಲ ಭಾಷಾ ಶಿಕ್ಷಕರು (ಉಳಿಕೆ ಮೂಲ ವೃಂದ 40+09 ಹೈ.ಕ), ಅಲ್ಪಸಂಖ್ಯಾತರ ನಿರ್ದೇಶನಾಲಯದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿನ ವಿದ್ಯಾರ್ಥಿನಿಲಯದ ನಿಯಮ ಪಾಲಕರು (ಉಳಿಕೆ ಮೂಲ ವೃಂದ 45+05 ಹೈ.ಕ), ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಲ್ಪಸಂಖ್ಯಾತರ ಮೌಲಾನಾ ಆಜಾದ್ ಮಾದರಿ ಶಾಲೆಗಳಲ್ಲಿನ ಗಣಿತ ಶಿಕ್ಷಕರು (ಉಳಿಕೆ ಮೂಲ ವೃಂದದ 79 ಹುದ್ದೆಗಳು), ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಲ್ಪಸಂಖ್ಯಾತರ ಮೌಲಾನಾ ಆಜಾದ್ ಮಾದರಿ ಶಾಲೆಗಳಲ್ಲಿನ ಗಣಿತ ಶಿಕ್ಷಕರು (ಹೈದ್ರಾಬಾದ್ ಕರ್ನಾಟಕ ವೃಂದದ 21 ಹುದ್ದೆಗಳು) ಅಂತಿಮ ಆಯ್ಕೆ ಪಟ್ಟಿ ಹಾಗೂ ಕಟ್‌ಆಫ್ ಅಂಕಗಳ ಪಟ್ಟಿಯನ್ನು ಆಗಸ್ಟ್ 13 ರಂದು ಆಯೋಗದ ವೆಬ್‌ಸೈಟ್ http://kpsc.kar.nic.in/lists ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಗ್ರಾಮೀಣ ಯುವಕರ ಮತ್ತು ಯುವತಿಯರಿಗೆ "ಗ್ರಾಮೀಣ ಉದ್ಯಮಶೀಲತೆ ಮತ್ತು ಯುವಸಬಲೀಕರಣ " ಕಾರ್ಯ ಗಾರ

ಬೆಂಗಳೂರು ಆಗಸ್ಟ್ 17 (ಕರ್ನಾಟಕ ವಾರ್ತೆ):

ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾಲಯ ಬೆಂಗಳೂರು ಮತ್ತು ಭಾರತ ಸರ್ಕಾರದ ಕೃಷಿ ಉತ್ಪನ್ನ ರಫ್ತು ಅಭಿವೃದ್ಧಿ ಸಂಸ್ಥೆ ಇವರ ಸಂಯುಕ್ತ ಆಶ್ರಯದಲ್ಲಿ ಆಗಸ್ಟ್ 2021ರ ಮಾಹೆಯ ಕೊನೆಯ ವಾರದಲ್ಲಿ 18 ರಿಂದ 35 ವರ್ಷ ವಯೋಮಾನದ ಗ್ರಾಮೀಣ ಯುವಕ, ಯುವತಿಯರಿಗೆ "ಗ್ರಾಮೀಣ ಉದ್ಯಮಶೀಲತೆ ಮತ್ತು ಯುವಸಬಲೀಕರಣ " ಬಗ್ಗೆ ಒಂದು ದಿನದ ಕಾರ್ಯಗಾರವನ್ನು ಜಿ ಕೆ ವಿ ಕೆ ಕ್ಯಾಂಪಸ್ ನಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಗಾರದಲ್ಲಿ ಬೆಂಗಳೂರು ನಗರ ಮತ್ತು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ ಮತ್ತು ತುಮಕೂರು ಜಿಲ್ಲೆಗಳ ಗ್ರಾಮೀಣ ಯುವಕ ಯುವತಿಯರು ಭಾಗವಹಿಸಬಹುದಾಗಿದೆ. ಕೃಷಿಗೆ ಸಂಬಂಧಿಸಿದ ಉದ್ಯಮಶೀಲತೆ ಮತ್ತು ವ್ಯವಹಾರ ಘಟಕ, ಉದ್ಯಮಗಳಿಗೆ ಸರ್ಕಾರದ ಯೋಜನೆಗಳು, ವ್ಯವಹಾರದ ಜಾಲಬಂಧ, ಮೌಲ್ಯವರ್ಧನೆ ಮತ್ತು ಕೃಷಿ ಉತ್ಪನ್ನಗಳ ಸಂಸ್ಕರಣೆ, ವ್ಯವಹಾರದ

ಆಡಳಿತ ಮತ್ತು ಅಭಿವೃದ್ಧಿ ಹಾಗೂ ಕೃಷಿ ಉತ್ಪನ್ನಗಳ ರಫ್ತು ವ್ಯವಹಾರಗಳಿಗೆ ಅವಕಾಶಗಳು ಮತ್ತು ಇತರೆ ವಿಷಯಗಳ ಬಗ್ಗೆ ಪರಿಣಿತರು ತರಬೇತಿ ನೀಡಲಿದ್ದಾರೆ.

ಆಸಕ್ತ ಯುವಕ/ಯುವತಿಯರು ತಮ್ಮ ಹೆಸರನ್ನು ಆಗಸ್ಟ್ 24 ರೊಳಗೆ ಮಿಂಚಂಚೆಗೆ ftiuasb@gmail.com ಅಥವಾ 8073183771 / 9742988880 ಗೆ ವಾಟ್ಸ್‌ಆಪ್ ಮೂಲಕ ಕಳುಹಿಸಿ ನೋಂದಣಿ ಮಾಡಿಕೊಳ್ಳಬೇಕು. ಆಯ್ಕೆಯಾದ ಅಭ್ಯರ್ಥಿಗಳಿಗೆ ತರಬೇತಿಯನ್ನು ಉಚಿತವಾಗಿ ನೀಡಲಾಗುವುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಗ್ರಾಹಕ ಸಂವಾದ ಸಭೆ

ಬೆಂಗಳೂರು ಆಗಸ್ಟ್ 17 (ಕರ್ನಾಟಕ ವಾರ್ತೆ) :

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ಎಲ್ಲಾ ಉಪವಿಭಾಗಗಳಲ್ಲಿ ಪ್ರತಿ ತಿಂಗಳ ಮೂರನೇ ಶನಿವಾರದಂದು ಮಧ್ಯಾಹ್ನ 3:00 ರಿಂದ 5:30 ರವರೆಗೆ ನಡೆಯುವ ಗ್ರಾಹಕ ಸಂವಾದ ಸಭೆಗಳಲ್ಲಿ, ಗ್ರಾಹಕ ಬಾಂಧವರು ಪಾಲ್ಗೊಂಡು ವಿದ್ಯುತ್ ಸಂಬಂಧಿತ ಸಮಸ್ಯೆಗಳನ್ನು ಬೆಸ್ಕಾಂನ ಅಧಿಕಾರಿಗಳೊಂದಿಗೆ ಮುಖಾಮುಖಿ ಚರ್ಚಿಸಿ ಪರಿಹರಿಸಿಕೊಳ್ಳಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## Customer Interaction Meeting

**Bengaluru, August 17 (Karnataka Information):**

BESCOM Consumers are requested to participate in the meetings conducted regularly from 3:00 to 5:30 pm on THIRD SATURDAY of every month at all Sub-Divisions of BESCOM for redressal of electricity related issues by one to one interaction with BESCOM officials.

## ಜಲಮಂಡಳಿಯ ವಿವಿಧ ಉಪವಿಭಾಗಗಳಲ್ಲಿ ನೀರಿನ ಅದಾಲತ್

ಬೆಂಗಳೂರು ಆಗಸ್ಟ್ 17 (ಕರ್ನಾಟಕ ವಾರ್ತೆ) :

ಬೆಂಗಳೂರು ಜಲಮಂಡಳಿಯು **(ಆಗ್ನೇಯ-6), (ಪೂರ್ವ-2)-2, (ಪೂರ್ವವಿಲೇಜ್)-2, (ದಕ್ಷಿಣವಿಲೇಜ್)-1, (ಪಶ್ಚಿಮ-3), (ನೈರುತ್ಯ-3), (ಆಗ್ನೇಯ-3), (ವಾಯುವ್ಯ-6), (ಕೇಂದ್ರ-3) (ವಾಯುವ್ಯ-2), (ಉತ್ತರ-3) ಮತ್ತು (ಈಶಾನ್ಯ-2)** ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ನೀರಿನ ಅದಾಲತ್‌ಅನ್ನು ಆಗಸ್ಟ್ 19 ಗುರುವಾರದಂದು ಬೆಳಿಗ್ಗೆ 9.30 ರಿಂದ 11:00 ಗಂಟೆಯವರೆಗೆ ನಡೆಸಲಾಗುವುದು.

**ಅದಾಲತ್ ನಡೆಯುವ ಸ್ಥಳಗಳು :** (ಆಗ್ನೇಯ-6) 9ನೇ ಮುಖ್ಯರಸ್ತೆ, ಬಿ.ಟಿ.ಎಂ. 2ನೇ ಹಂತ, ಬೆಂಗಳೂರು-76 ಸೇವಾಠಾಣೆಗಳು ಬಿ.ಟಿ.ಎಂ.ಲೇಔಟ್-1,2&3 ದೂರವಾಣಿ ಸಂಖ್ಯೆ 9845444042, (ಪೂರ್ವ-2)-2 ಬಿ-31, ಐಟಿಐ ಕಾಲೋನಿ, ದೂರವಾಣಿ ನಗರ, ಬೆಂಗಳೂರು-16 ಕೆ.ಆರ್.ಪುರಂ, ಬಸವನಪುರ, ದೇವಸಂದ್ರ, ಸೇವಾಠಾಣೆಗಳು ರಾಮಮೂರ್ತಿ ನಗರ, ವಿಜಿನಾಪುರ, ದೂರವಾಣಿನಗರ ದೂರವಾಣಿ ಸಂಖ್ಯೆ 25663688, (ಪೂರ್ವ ವಿಲೇಜ್)-2 ಕಾಡುಗೋಡಿ ಎಸ್.ಟಿ.ಪಿ ಆವರಣ, ವೈಟ್ ಫೀಲ್ಡ್ ರೈಲ್ವೆ ನಿಲ್ದಾಣ ಹತ್ತಿರ, ಸೋಮೇನಹಳ್ಳಿ(ಪೋ), ಕಾಡುಗೋಡಿ, ಸೇವಾಠಾಣೆಗಳು ಪೂರ್ವ ವಿಲೇಜ್-2-1 &2-2, ಕಾಡುಗೋಡಿ ವರ್ತೂರು ದೂರವಾಣಿ ಸಂಖ್ಯೆ 9741969945, (ದಕ್ಷಿಣ ವಿಲೇಜ್)-1 21ನೇ ಮುಖ್ಯ ರಸ್ತೆ, 11ನೇ ಬ್ಲಾಕ್, ಅಂಜನಾಪುರ ಸೇವಾಠಾಣೆಗಳು ಅಂಜನಾಪುರ,ಬ್ಯಾಂಕ್ ಆಫೀಸರ್ಸ್ ಲೇಔಟ್, ಗೊಟ್ಟಿಗೆರೆ ದೂರವಾಣಿ ಸಂಖ್ಯೆ 9686566941, ಪಶ್ಚಿಮ-3 ವಿಜಯನಗರ ವಾಟರ್ ಟ್ಯಾಂಕ್,ವಿಜಯನಗರ 8ನೇ ಮುಖ್ಯ ರಸ್ತೆ, ಎಂ.ಸಿ.ಲೇಔಟ್, ಬೆಂಗಳೂರು-40 ಸೇವಾಠಾಣೆಗಳು ಚಂದ್ರ ಲೇಔಟ್-1&2, ವಿಜಯನಗರ ಓ.ಹೆಚ್.ಟಿ, ಮೂಡಲಪಾಳ್ಯ ದೂರವಾಣಿ ಸಂಖ್ಯೆ 9980421461, ನೈರುತ್ಯ-3 #3, ಎಂ.ಎನ್.ಕೆ ಪಾರ್ಕ್ ಬಸವನಗುಡಿ,ಬೆಂಗಳೂರು-04 ಸೇವಾಠಾಣೆಗಳು

ಎಂ.ಎನ್.ಕೆ.ಪಾರ್ಕ್,ಬಿ.ಟಿ.ಆರ್, ಮೌಂಟ್‌ಜಾಯ್, ನಾಗೇಂದ್ರಬ್ಲಾಕ್, ಗಿರಿನಗರ, ದೂರವಾಣಿ ಸಂಖ್ಯೆ 22945155, (ಆಗ್ನೇಯ-3) ಸ್ವಾಮಿ ವಿವೇಕಾನಂದ ರಸ್ತೆ, ಲಿಡೋ ಮಾಲ್ ಎದುರು, ಹಲಸೂರು, ಬೆಂಗಳೂರು-08 ಸೇವಾಠಾಣೆಗಳು ಹಲಸೂರು, ದೊಮ್ಮಲೂರು, ಮಾರತ್ ಹಳ್ಳಿ ದೂರವಾಣಿ ಸಂಖ್ಯೆ 9845444049, (ವಾಯುವ್ಯ-6) ಫೈಪ್ ಲೈನ್ ರಸ್ತೆ, ಸುಂಕದ ಕಟ್ಟೆ,ಬೆಂಗಳೂರು-91 ಸೇವಾಠಾಣೆಗಳು ಹೆಗ್ಗನಹಳ್ಳಿ, ಕೊಟ್ಟಿಗೆಪಾಳ್ಯ, ಹೇರೋಹಳ್ಳಿ. ದೂರವಾಣಿ ಸಂಖ್ಯೆ 7259304007, (ಕೇಂದ್ರ-3) ನೇತಾಜಿ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು-05 ಸೇವಾಠಾಣೆಗಳು ಫ್ರೇಜರ್ ಟೌನ್, ಮಚಲಿಬೆಟ್ಟ, ಪಿಳ್ಳಣ್ಣಗಾರ್ಡನ್ 1&2 ದೂರವಾಣಿ ಸಂಖ್ಯೆ 9845444053, (ವಾಯುವ್ಯ-2) 5ನೇ ಬ್ಲಾಕ್, ನಾಗರಭಾವಿ, ಹೊರವರ್ತುಲ ರಸ್ತೆ. ಬೆಂಗಳೂರು-72 ಸೇವಾಠಾಣೆಗಳು ಕೇತಮಾರನಹಳ್ಳಿ, ರಾಜಾಜಿನಗರ, ವೆಸ್ಟ್ ಆಫ್ ಕಾರ್ಡ್ ರಸ್ತೆ-1&2, ಕಾಮಾಕ್ಷಿಪಾಳ್ಯ, ಕಮಲಾನಗರ, ಮಹಾಲಕ್ಷ್ಮೀ ಲೇಔಟ್, ಅಗ್ರಹಾರ ದಾಸರಹಳ್ಳಿ. ದೂರವಾಣಿ ಸಂಖ್ಯೆ 9845444073, (ಉತ್ತರ-3) 3ನೇ ಬ್ಲಾಕ್, ಬಿಇಎಲ್ ಲೇಔಟ್, ವಿದ್ಯಾರಣ್ಯಪುರ, ಬೆಂಗಳೂರು ಸೇವಾಠಾಣೆಗಳು ಸಿಂಗಾಪುರ, ವಿದ್ಯಾರಣ್ಯಪುರ, ಸಹಕಾರನಗರ ದೂರವಾಣಿ ಸಂಖ್ಯೆ 8618366506, (ಈಶಾನ್ಯ-2) #55, 8ನೇ & 9ನೇ ಅಡ್ಡ ರಸ್ತೆ, ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು-20 ಸೇವಾಠಾಣೆಗಳು ಕೆಂಪೇಗೌಡ ಟವರ್, ಕುಮಾರಪಾರ್ಕ್, ಜಯಮಹಲ್ ದೂರವಾಣಿ ಸಂಖ್ಯೆ 22945135 ನ್ನು ಸಂಪರ್ಕಿಸಬಹುದಾಗಿದೆ.

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಳಿಯ ಸಹಾಯವಾಣಿ 1916 ಹಾಗೂ ವಾಟ್ಸ್‌ಆಪ್ ಸಂಖ್ಯೆ: 8762228888 ಗೆ ಸಂಪರ್ಕಿಸಬಹುದಾಗಿದೆ. ಸಾರ್ವಜನಿಕರು ಮೇಲಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಈ ಅದಾಲತ್ ಸೌಲಭ್ಯವನ್ನು ಬಳಸಿಕೊಳ್ಳಬಹುದಾಗಿದೆ ಎಂದು ಬೆಂಗಳೂರು ಜಲಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

.

## ಅರ್ಜಿ ಸಲ್ಲಿಸಲು ದಿನಾಂಕ ವಿಸ್ತರಣೆ

ಬೆಂಗಳೂರು ಆಗಸ್ಟ್ 17 (ಕರ್ನಾಟಕ ವಾರ್ತೆ) :

**2021-22**ನೇ ಸಾಲಿಗೆ ಬೆಂಗಳೂರು ವಿಶ್ವವಿದ್ಯಾಲಯವು, ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳು ವಿವಿಧ ರೀತಿಯ ಸಂಯೋಜನಾ ಅರ್ಜಿಗಳನ್ನು ಸಲ್ಲಿಸಲು ನಿಗಧಿಪಡಿಸಿದ್ದ ಕೊನೆಯ ದಿನಾಂಕವನ್ನು ರೂ.1,000/-ಗಳ ದಂಡ ಶುಲ್ಕದೊಂದಿಗೆ ದಿನಾಂಕ:**21-08-2021**ರ ವರೆಗೆ ವಿಸ್ತರಿಸಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## Extension of last date for submission of applications

**Bengaluru, August 17 (Karnataka Information):**

In continuation of University notification of even no. dated: 01-07-2021, the last date for submission of affiliation applications for the year **2021-22** is extended up to **21-08-2021** with a late fee of Rs.1,000/-. The other contents and conditions of the notification dated: 01-07-2021 remains unaltered.

## ಇಂಟೆಗ್ರೇಟೆಡ್ ಪ್ರಥಮ ಸೆಮಿಸ್ಟರ್ ಕೋರ್ಸ್‌ಗೆ ಪ್ರವೇಶ ಪಡೆಯಲು ಅರ್ಜಿ ಆಹ್ವಾನ

ಬೆಂಗಳೂರು ಆಗಸ್ಟ್ 17 (ಕರ್ನಾಟಕ ವಾರ್ತೆ) :

ಬೆಂಗಳೂರು ವಿಶ್ವವಿದ್ಯಾಲಯ ಆರಂಭಿಸಿರುವ ಐದು ವರ್ಷದ ಇಂಟೆಗ್ರೇಟೆಡ್ ಕೋರ್ಸ್‌ಗೆ ದ್ವಿತೀಯ ಪಿಯುಸಿ ಉತ್ತೀರ್ಣರಾದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ಪಿಯುಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪ್ರತಿಶತ 50% ರಷ್ಟು ಅಂಕಗಳಿಸಿದ ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಹಾಗೂ ಪ್ರತಿಶತ 45% ರಷ್ಟು ಅಂಕಗಳಿಸಿದ **ಪ.ಜಾ./ಪ.ಪಂ/ಪ್ರವರ್ಗ-1ರ** ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಅಭ್ಯರ್ಥಿಗಳ ಆಯ್ಕೆಯ ಪ್ರಕ್ರಿಯೆಯನ್ನು ಅವರು ಗಳಿಸಿದ ಅಂಕಗಳ ಜೇಷ್ಠತಾ ಆಧಾರದ ಮೇಲೆ ನಿರ್ಧರಿಸಲಾಗುವುದು.

ಸಾಮಾನ್ಯ ಮತ್ತು ಪೇಮೆಂಟ್ ಸೀಟು ಶುಲ್ಕ ಎರಡಕ್ಕೂ **ರೂ.400/- ಹಾಗೂ ಪ.ಜಾ/ಪ.ಪಂ/ ಪ್ರವರ್ಗ-1** ಶುಲ್ಕ **ರೂ-200/- ನಿಗಧಿಪಡಿಸಲಾಗಿದೆ.** ಆನ್‌ಲೈನ್ ಮೂಲಕ ಅರ್ಜಿಸಲ್ಲಿಸಲು **31.08.2021** ಕೊನೆಯ ದಿನಾಂಕವಾಗಿರುತ್ತದೆ.

ಸಾಮಾನ್ಯ ಮತ್ತು ಪೇಮೆಂಟ್ ಸೀಟು ಎರಡಕ್ಕೂ 01/09/2021 ರಿಂದ 06/09/2021 ರೊಳಗೆ ಅರ್ಜಿ ಸಲ್ಲಿಸುವವರು ರೂ.100/- ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಬಹುದಾಗಿದ್ದು, **ಸಾಮಾನ್ಯ ವರ್ಗಕ್ಕೆ** ಶುಲ್ಕ **ರೂ.500/-, ಪ.ಜಾ/ಪ.ಪಂ/ ಪ್ರವರ್ಗ-1** ಶುಲ್ಕ **ರೂ.300/- ನಿಗಧಿಪಡಿಸಲಾಗಿದೆ. ನಂತರ** ಜೇಷ್ಠತಾ ಪಟ್ಟಿ ಮತ್ತು ಪ್ರವೇಶ ಪ್ರಕ್ರಿಯೆಯನ್ನು **ಘೋಷಿಸಲಾಗುವುದು.**

ಅಭ್ಯರ್ಥಿಗಳು ಅರ್ಜಿಯನ್ನು ಡೌನ್‌ಲೋಡ್‌ಮಾಡಿಕೊಂಡು, ಭರ್ತಿಮಾಡಿದ ನಂತರ ಅರ್ಜಿಯ ಜೊತೆಗೆ ಇತರೆ ದಾಖಲಾತಿಗಳೊಂದಿಗೆ ಮುಖ್ಯಸ್ಥರು, ಜೀವವಿಜ್ಞಾನ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560056. ಇವರಿಗೆ ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ: 22961521/1923/ 8722048456 ರವರನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಭೂಮಾಪನಾ ಕೆಲಸಗಳಿಗೆ ಆಸಕ್ತಿ ವ್ಯಕ್ತಪಡಿಸುವಿಕೆ

ಬೆಂಗಳೂರು ಆಗಸ್ಟ್ 17 (ಕರ್ನಾಟಕ ವಾರ್ತೆ) :

ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿರುವ ಭೂಮಿಯ ಭೂಮಾಪನಾ/ಕಂದಾಯ/ ಭೂದಾಖಲೆ ಹಾಗೂ ಭೂ-ಸಂಬಂಧಿತ ನ್ಯಾಯಾಲಯದಲ್ಲಿರುವ ದಾವೆಗಳ ಕರ್ತವ್ಯಗಳನ್ನು ನಿರ್ವಹಿಸಲು ರಾಜ್ಯ ಸರ್ಕಾರ/ಸ್ಥಳೀಯ ಪ್ರಾಧಿಕಾರದಿಂದ ನಿವೃತ್ತಿ ಹೊಂದಿರುವ ಅರ್ಹ/ನುರಿತ ಪರಿಣಿತಿ ಹೊಂದಿರುವ ಆಸಕ್ತಿಯುಳ್ಳ ಅಭ್ಯರ್ಥಿಗಳಿಂದ ಒಂದು 'ಪ್ರಥಮ ದರ್ಜೆ ಭೂಮಾಪಕ' ಹುದ್ದೆಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ನೇಮಿಸಿಕೊಳ್ಳುವ ಸಲುವಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳಿಗೆ ಕರ್ನಾಟಕ ಸರ್ಕಾರದ ಭೂಮಾಪನ ಕಾಯಿದೆ, ನಿಯಮಗಳು ಹಾಗೂ 'ಮೋಜಿಣಿ', 'ಭೂಮಿ' ಹಾಗೂ ಇತರೆ ಭೂ-ಸಂಬಂಧಿತ ಅಂತರ್ಜಾಲದ ತಂತ್ರಾಂಶದ ಹಾಗೂ ಮಾಹಿತಿ ತಂತ್ರಜ್ಞಾನದ ಜ್ಞಾನವು ಅವಶ್ಯವಿರುತ್ತದೆ. ಆಸಕ್ತರು ಸ್ವ-ವಿವರಗಳುಳ್ಳ ಅರ್ಜಿಯಲ್ಲಿ, ವಿದ್ಯಾರ್ಹತೆ, ಸೇವೆಯ ಕುರಿತು ಮಾಹಿತಿ, ಅನುಭವ, ಪ್ರಮುಖ ಸಾಮರ್ಥ್ಯಗಳ ಕುರಿತು ಪೂರಕ ದಾಖಲೆಗಳೊಂದಿಗೆ ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು-560056ಕ್ಕೆ, ದಿನಾಂಕ: 31-08-2021ರೊಳಗೆ ಅರ್ಜಿಯನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಯನ್ನು ಬೆಂಗಳೂರು ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣ www.bangaloreuniversity.ac.in ಮುಖಪುಟದಲ್ಲಿ ವೀಕ್ಷಿಸಿ ಪಡೆದುಕೊಳ್ಳಬಹುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಕೆಎಸ್‌ಆರ್‌ಟಿಸಿಗೆ ರೋಟರಿ 3190 ಡಿಸ್ಟ್ರಿಕ್‌ನ ಸಾಮಾಜಿಕ ಕಳಕಳಿಯ ಪ್ರಶಸ್ತಿ ಲಭಿಸಿದೆ

ಬೆಂಗಳೂರು ಆಗಸ್ಟ್ 17 (ಕರ್ನಾಟಕ ವಾರ್ತೆ) :

ಕೆಎಸ್‌ಆರ್‌ಟಿಸಿಯು ಕೊವಿಡ್ ಸಮಯದಲ್ಲಿ ಅನುಷ್ಠಾನಗೊಳಿಸಿದ ಸಾಮಾಜಿಕ ಕಳಕಳಿಯ ಉಪಕ್ರಮಗಳಾದ **"ಮೊಬೈಲ್ ಫೀವರ್ ಕ್ಲಿನಿಕ್"**ಗೆ ನಿಗಮದ ಹಳೆಯ ಬಸ್ಸುಗಳನ್ನು ಉಪಯೋಗಿಸಿಕೊಂಡು ಆಂತರಿಕಾಗಿ ನಿಗಮದ ಕಾರ್ಯಾಗಾರಗಳಲ್ಲಿಯೇ 20 ಮೊಬೈಲ್ ಫೀವರ್ ಕ್ಲಿನಿಕ್ ಬಸ್ಸುಗಳನ್ನು ನಿರ್ಮಿಸಲಾಗಿತ್ತು. ಪ್ರಾದೇಶಿಕ ಕಾರ್ಯಾಗಾರ, ಬೆಂಗಳೂರಿನಲ್ಲಿ ಆಂತರಿಕವಾಗಿ ಲಭ್ಯವಿರುವ ವಸ್ತುಗಳಲ್ಲಿ ಮಿನಿ ಬಸ್‌ನ್ನು **"ಸಾರಿಗೆ ಸಂಜೀವಿನಿ ಆಂಬುಲೆನ್ಸ್"** ಆಗಿ ಪರಿವರ್ತಿಸಲಾಗಿತ್ತು. ರೋಟರಿ ಆಡ್ವಿಕಾ ನಯೋನಿಕಾ 200 ಹಾಸಿಗೆಗಳ ಕೋವಿಡ್ ಕೇರ್ ಸೆಂಟರ್, ಬಸವೇಶ್ವರ ಬಸ್ ನಿಲ್ದಾಣ, ಬೆಂಗಳೂರಿನಲ್ಲಿ ಒದಗಿಸಲಾಗಿತ್ತು. **"ಸ್ಯಾನಿಟೈಜರ್ ಬಸ್ಸು"**ಗಳನ್ನು ಸಹ ನಿರ್ಮಿಸಲಾಗಿತ್ತು.

ಕೆಎಸ್‌ಆರ್‌ಟಿಸಿಯು ಒಂದು ಅನುಪಯುಕ್ತ ಬಸ್ಸನ್ನು (Scrap Bus) ಸುಸಜ್ಜಿತಾ **"ಸ್ತ್ರೀ ಶೌಚಾಲಯ"**ವನ್ನಾಗಿ ನಿರ್ಮಿಸಿ ಬೆಂಗಳೂರು ಮತ್ತು ದಾವಣಗೆರೆಯಲ್ಲಿ ಬಸ್ ನಿಲ್ದಾಣಗಳಲ್ಲಿ ಬಳಸಲಾಗುತ್ತಿದೆ. ಅದೇ ರೀತಿ, ಹಳೆಯ

ಐರಾವತ ಹವಾನಿಯಂತ್ರಿತ ಬಸ್ಸನ್ನು ಮೆ: ಕಿದ್ವಾಯಿ ಕ್ಯಾನ್ಸರ್ ಸಂಸ್ಥೆರವರಿಗೆ ಉಚಿತವಾಗಿ ನೀಡಿ, ಗ್ರಾಮೀಣ ಪ್ರದೇಶದಲ್ಲಿ ಸಾಮಾನ್ಯ ಜನರಿಗೆ ಪ್ರಾಥಮಿಕ ಹಂತದಲ್ಲಿ ಕ್ಯಾನ್ಸರ್ ಬಗ್ಗೆ ತಿಳುವಳಿಕೆ ಮೂಡಿಸುವ ಹಾಗೂ ಪ್ರಾಥಮಿಕ ಹಂತದಲ್ಲಿ ಕ್ಯಾನ್ಸರ್ ಗುರುತಿಸುವಿಕೆಗಾಗಿ ಮೊಬೈಲ್ ರಕ್ತದಾನದ **"ಬ್ಲಡ್ ಬ್ಯಾಂಕ್"** ಬಸ್ಸನ್ನಾಗಿ ಉಪಯೋಗಿಸಲಾಗುತ್ತಿದೆ.

ದೇಶದ ಸಾರಿಗೆ ನಿಗಮಗಳಲ್ಲಿಯೇ ಮೊದಲ ಪ್ರಯತ್ನವಾಗಿ **"ಸಾರಿಗೆ ಸುರಕ್ಷಾ" ಸಂಚಾರಿ – ಐಸಿಯು** ಆಕ್ಸಿಜನ್/ ವೆಂಟಿಲೇಟರ್ ವ್ಯವಸ್ಥೆಯುಳ್ಳ 5 ಹಾಸಿಗೆಯ ಐಸಿಯು ಬಸ್ಸನ್ನು ಆಂತರಿಕವಾಗಿ ನಿರ್ಮಿಸಿ, ನಿಗಮದ ಪುತ್ತೂರು ವಿಭಾಗದ ವ್ಯಾಪ್ತಿಯಲ್ಲಿನ 21 ಗ್ರಾಮಗಳ 1303 ಮಂದಿ ಈಗಾಗಲೇ ಇದರ ಪ್ರಯೋಜನ ಪಡೆದಿದ್ದಾರೆ.
ಈ ಮೇಲ್ಕಂಡ ಕೊವಿಡ್ ಸಮಯದಲ್ಲಿನ ಉಪಕ್ರಮಗಳಿಗೆ **ರೋಟರಿ 3190 ಡಿಸ್ಟ್ರಿಕ್‌ನ ಕೊವಿಡ್ ಸಮಯದಲ್ಲಿನ ಉಪಕ್ರಮಗಳಿಗೆ ಸಾಮಾಜಿಕ ಕಳಕಳಿ ಪ್ರಶಸ್ತಿ ಲಭಿಸಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

## KSRTC have been awarded by the Rotary 3190 District

Bangaluru, Aug 17, (Karnataka Information) :

Over 20 mobile Fever Clinic buses were built in-house in our workshops by converting old buses as "Mobile Fever Clinic" and a mini bus was converted into a "Sarige Sanjeevani Ambulance" at regional workshop, Bengaluru. The Rotary Advika Nayonika 200-beds COVID Care Center was provided at Sri Basaveshwara Bus Station, Bangalore. "Sanitizer buses" were also built.

KSRTC has made use of scarp buses as "Sthree toilet" and is being used at Bengaluru and Davanagere bus stations. Similarly, the old Airavat air-conditioned bus is given at free of cost to KIDWAI CANCER hospital and has been converted as mobile blood donation bank for rural areas "Blood Bank" for primary cancer awareness and early detection of Cancer.

"Sarige Suraksha" ICU on Wheels, first of its kind initiative in the STUS of the country . Oxygen / Ventilator support 5-beded ICU bus built in-house, the said bus deployed at Puttur Division and 1303 people from 21 villages have benefited from this bus.
The above initiatives implemented during COVID times have been recognized by ROTARY 3190 and awarded under corporate social responsibility initiatives.

**ಬೆಂಗಳೂರು ನಗರದಲ್ಲಿ ಸ್ಥಾಪಿಸಿರುವ ವಾಯು ಗುಣಮಟ್ಟ ಮಾಪನ ಕೇಂದ್ರಗಳ ವಾಯು ಗುಣಮಟ್ಟ ಸೂಚ್ಯಂಕ**

ಬೆಂಗಳೂರು, ಆಗಸ್ಟ್ 17 (ಕರ್ನಾಟಕ ವಾರ್ತೆ):

**ವಾಯುಗುಣಮಟ್ಟ ಸೂಚ್ಯಂಕ (AQI), ಬೆಂಗಳೂರು**

**ದಿನಾಂಕ: 17.8.2021 (Average of past 24 hours)**

| ಕ್ರಮ ಸಂಖ್ಯೆ | ಮಾಪನ ಕೇಂದ್ರಗಳ ಹೆಸರು | ವಾಯುಗುಣಮಟ್ಟ ಸೂಚ್ಯಂಕ (AQI) | ವರ್ಗ | ಪ್ರಮುಖ ಮಾಲಿನ್ಯಕಾರಕ |
|---|---|---|---|---|
| 1 | ಪಶುವೈದ್ಯಕೀಯಕಾಲೇಜು, ಹೆಬ್ಬಾಳ | 39 | ಉತ್ತಮ | $PM_{10}$ |
| 2 | ಜಯನಗರ 5ನೇ ಬ್ಲಾಕ್, ಶಾಲಿನಿ ಮೈದಾನ | 47 | ಉತ್ತಮ | $PM_{10}$ |
| 3 | ಕವಿಕ, ಮೈಸೂರುರಸ್ತೆ | 50 | ಉತ್ತಮ | $PM_{10}$ |
| 4 | ರಾಜೀವ್‌ಗಾಂಧಿಎದೆರೋಗಗಳ ಸಂಸ್ಥೆ, ನಿಮ್ಹಾನ್ಸ್ ಹೊಂಬೆಗೌಡನಗರ | 43 | ಉತ್ತಮ | $PM_{10}$ |
| 5 | ಹೆಚ್.ಎಸ್.ಆರ್ ಲೇಔಟ್, ಕೇಂದ್ರರೇಷ್ಮೆ ಮಂಡಳಿ ಹತ್ತಿರ | 68 | ತೃಪ್ತಿಕರ | $PM_{10}$ |
| 6 | ನಗರರೈಲ್ವೆ ನಿಲ್ದಾಣ, ಮೆಜೆಸ್ಟಿಕ್, ಬೆಂಗಳೂರು | 68 | ತೃಪ್ತಿಕರ | CO |
| 7 | ಸಾಣೆಗುರುವನಹಳ್ಳಿ, ನಿಸರ್ಗ ಭವನ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಶಿವನಗರ | 42 | ಉತ್ತಮ | $PM_{10}$ |
| **(17.8.2021 at 10.05 AM)** | | | | |
| 8 | BWSSB,ಕಾಡಬೀಸನಹಳ್ಳಿ | | ಸಾಧಾರಣ | $PM_{10}$ |
| 9 | ಪೀಣ್ಯ | | ತೃಪ್ತಿಕರ | $PM_{2.5}$ |
| 10 | ಬಿಟಿಎಂ ಲೇಔಟ್ | | ತೃಪ್ತಿಕರ | $PM_{10}$ |

| ವರ್ಗ(ಶ್ರೇಣಿ) | ಉಂಟಾಗಬಹುದಾದಆರೋಗ್ಯ ಪರಿಣಾಮಗಳು |
|---|---|
| **ಉತ್ತಮ (0–50)** | ಕನಿಷ್ಠ ಪರಿಣಾಮ |
| **ತೃಪ್ತಿಕರ (51–100)** | ಸೂಕ್ಷ್ಮಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ |
| **ಸಾಧಾರಣ (101–200)** | ಶ್ವಾಸಕೋಶ, ಹೃದಯಕಾಯಿಲೆಯವರು, ಮಕ್ಕಳು ಮತ್ತು ಹಿರಿಯ ವಯಸ್ಕರಿಗೆ ಉಸಿರಾಟದ ಅಸ್ವಸ್ಥತೆ |
| **ಕಳಪೆ (201–300)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಉಸಿರಾಟದ ಅಸ್ವಸ್ಥತೆ |
| **ಅತಿ ಕಳಪೆ (301–400)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಶ್ವಾಸಕೋಶದಅಸ್ವಸ್ಥತೆ |
| **ತೀವ್ರ (>401)** | ಆರೋಗ್ಯವಂತಜನರಿಗೂ ಉಸಿರಾಟದ ಅಸ್ವಸ್ಥತೆ |

# AQI of the CAAQM stations established in Bengaluru City

## Date : 17.8.2021 (Average of past 24 hours)

| Sl. No. | Station | AQI | Category | Prominent Pollutant |
|---|---|---|---|---|
| 1 | Veterinary College Hebbal | 39 | Good | $PM_{10}$ |
| 2 | Jayanagar 5th Block, Shalini ground | 47 | Good | $PM_{10}$ |
| 3 | KAVIKA, Mysore Road | 50 | Good | $PM_{10}$ |
| 4 | Rajeev Gandhi Institute of Chest Disease, NIMHANS, Hombegowda Nagar | 43 | Good | $PM_{10}$ |
| 5 | HSR Layout, near Central Silkboard | 68 | Satisfactory | $PM_{10}$ |
| 6 | City Railway Station, Magestic, Bengaluru | 68 | Satisfactory | CO |
| 7 | Saneguruvanahalli, NisargaBhavan, KSPCB, Shivanagara | 42 | Good | $PM_{10}$ |
| **(17.8.2021 at 10.05 AM)** | | | | |
| 8 | BWSSB, Kadabesanahalli | 59 | Satisfactory | $PM_{10}$ |
| 9 | Peenya | 72 | Satisfactory | $PM_{2.5}$ |
| 10 | BTM Layout | 67 | Satisfactory | CO |

| Category (Range) | Possible Health Impacts | Category (Range) | Possible Health Impacts |
|---|---|---|---|
| Good (0–50) | Minimal Impact | Poor (201–300) | Breathing discomfort to people on prolonged exposure |
| Satisfactory (51–100) | Minor breathing discomfort to sensitive people | Very Poor (301–400) | Respiratory illness to the people on prolonged exposure |
| Moderate (101–200) | Breathing discomfort to the people with lung, Heart disease, children and older | Severe (>401) | Respiratory effects even on healthy people |